ಸಾಕ್ಷಿಯ ಹೆಸರುಃ ಶ್ರೀನಿವಾಸ

ದಿನಾಂಕಃ **09-03-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಆರ್.ಎಸ್. ವಕೀಲರಿಂದಃ**

1) ಅಸಲು ದಾವಾ ಸಂಖ್ಯೆಃ 400/1989 ರಲ್ಲಿನ ರಾಜಿ ಅರ್ಜಿ ಮತ್ತು ರಾಜಿ ಡಿಕ್ರಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ 01 ಮತ್ತು 2 ಎಂದು ಗುರುತಿಸಲಾಯಿತು.

2) 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಿನಾಂಕಃ03.12.2013 ರಂದು ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟ ದಾನಪತ್ರದ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 03 ಎಂದು ಗುರುತಿಸಲಾಯಿತು.

3) 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ದಿನಾಂಕಃ12.02.2014 ರಂದು ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟ ಹಕ್ಕು ಬಿಡುಗಡೆ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದರ ದೃಢೀಕೃತ ಪ್ರತಿಯನ್ನು ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ.

4) ದಾವಾಸ್ವತ್ತಿಗೆ ಸಂಬಂಧಪಟ್ಟ ಮೂರು ಗಣಕೀಕೃತ ಮತ್ತು ಎರಡು ಕೈ ಬರಹ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 04 ರಿಂದ ನಿಪಿ 08 ಎಂದು ಗುರುತಿಸಲಾಯಿತು.

5) ಸರ್ವೆ ನಂ.37/2 ಮತ್ತು 36/2 ಕ್ಕೆ ಸಂಬಂಧಿಸಿದ ಎರಡು ನಮೂನೆ-5 ಮತ್ತು ಎರಡು ಸ್ಕೆಚ್‌ಗಳ ನಕಲು ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ 09 ರಿಂದ 12 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.